ಈ) ಈ ಯೋಜನೆಗಳಿಗೆ ಮೀಸಲಿಟ್ಟ ಹಣ ಕೆಳಕಂಡಂತಿದೆ.

1. ಗ್ರಾಮ ಸ್ವರಾಜ್ ಯೋಜನೆ : ರೂ.160.03 ಕೋಟಿ

2. ಸುವರ್ಣ ಗ್ರಾಮೋದಯ ಯೋಜನೆ : ರೂ.350.00 ಕೋಟಿ

580 (801) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಕೈಗೊಂಡಿರುವ ಸುವರ್ಣ ಗ್ರಾಮಾಭಿವೃದ್ಧಿ ಯೋಜನಾ ಕಾರ್ಯಕ್ರಮ ದಡಿಯಲ್ಲಿ ಗ್ರಾಮದ ಸರ್ವೋತ್ತಮ ಅಭಿವೃದ್ಧಿಗೆ ಬೇಕಾಗುವ ಪೂರ್ಣ ಹಣ ಒದಗಿಸಲು ಸರ್ಕಾರದ ಘೀತಿಯಂತೆ ಘೋಷಿಸಿರುವ ಹಣ ಸಾಲದೇ ಇರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಂತಹ ಸನ್ನಿವೇಶಗಳಲ್ಲಿ ಸುವರ್ಣ ಗ್ರಾಮ ಯೋಜನೆ ಬಿರುದನ್ನು ಸಾರ್ಥಕಗೊಳಿಸಲು ಅಗತ್ಯ ಬೀಳುವ ಹಣವನ್ನು ಸರ್ಕಾರ ಕೊಡಲಿಚ್ಛಿಸಿದೆಯೇ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಸುವರ್ಣ ಗ್ರಾಮೋದಯ ಯೋಜನೆಯು ದಿ: 25–02–2007ರಲ್ಲಿ ಪ್ರಾರಂಭಗೊಂಡಿದೆ ಮತ್ತು ಯೋಜನೆಯು ಪ್ರಾರಂಭಿಕ ಹಂತದಲ್ಲಿರುತ್ತದೆ. ಪ್ರಗತಿ ಆಧಾರ ಮೇರೆಗೆ ಅನುದಾನವನ್ನು ಒದಗಿಸಲಾಗುವುದು.

ಆ) ಅಗತ್ಯವಾದ ಅನುದಾನವನ್ನು ಸರ್ಕಾರ ಒದಗಿಸುತ್ತದೆ.

581 (696) ಶ್ರೀ ಮೋರೆ ಎಸ್.ಆರ್. (ಧಾರವಾಡ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ–ಧಾರವಾಡ ಮಹಾನಗರ ಹಾಗೂ ಅದರ ಸುತ್ತ–ಮುತ್ತ ಕರ್ನಾಟಕ ಗೃಹ ಮಂಡಳಿಯು ಖರೀದಿ ಮಾಡಿರುವ ಒಟ್ಟು ಜಮೀನಿನ ವಿಸ್ತೀರ್ಣ ಎಷ್ಟು; (ವಿವರ ನೀಡುವುದು);

2) ಗೃಹ ಮಂಡಳಿಯು ನೇರವಾಗಿ ರೈತರಿಂದ ಖರೀದಿಸಿದ ಜಮೀನು ಎಷ್ಟು; ಪ್ರತಿ ಎಕರೆಗೆ ನೀಡಿದ ದರವೆಷ್ಟು;